# ತಿಳಿ

1
ಗಂಜಿ ತಿಳಿಯ ಹಾಗೆ
ಆರೈಕೆ ಮಾಡುವ ಅವರನ್ನು ಕೇಳಿದೆ

ಇದು ಹೀಗೆಯೇ ಇರಬೇಕೇನು?

ಉರುಳಿ ಹೋಗುವ ವರ್ಷಗಳು
ಮುಗಿದು ಹೋಗೋ ಸಮಯ

ಹೊಸ ಜನ ತುಂಬುತ್ತಾರೆ ಭೂಮಿಯ ಮೇಲೆ
ಹಳಬರು ಹಣ್ಣಾಗುತ್ತಾರೆ
ನಾವೇ ಹಳಬರಾಗುತ್ತೇವೆ


ಹಳಬರಾದಾಗ ಅದೃಶ್ಯರಾಗೋದು ಸುಲಭ
ಅಂದೆ
ಒಂದು ಜ್ಯೋತಿ ಹಚ್ಚಿಟ್ಟುಕೊಂಡು
ಎಷ್ಟು ವಸಂತ ಕಾಯಬಹುದು?

ಇಂಥ ಮಾತಾಡಿಕೊಂಡೇ ಬೀಳ್ತೀಯ ಆಳವಾದ ಬಾವೀಲಿ
ಕಳೆದ ಸರ್ತಿ ಎತ್ತೋಕೆ ನಾನೇ ಬರಬೇಕಾಯ್ತಲ್ಲ
ಎನ್ನುತ
ಬಿಯರನ್ನು ಮಗ್‌ಗೆ ಬಗ್ಗಿಸಿ ಕೊಟ್ಟರು

ಕುಡಿಯದೇನೇ ಈ ವೇಷ ನನ್ನದು
ಇನ್ನು ಶುರು ಮಾಡಿದರೆ ಇದನ್ನೊಂದು
ಕೇಳೋದೇ ಬೇಡ ಬಿಡಿ ಎನ್ನುತ
ಮಗ್ ಸರಿಸಿಟ್ಟೆ ಪಕ್ಕಕ್ಕೆ.

2
ಜ್ವರ ಬಿಟ್ಟು ಏಳುವಾಗ
ಬೆವರಿ ಬೆವರಿ
ಮೈಯ ಕಲ್ಮಶವೆಲ್ಲ ಬಟ್ಟೆ ಪಾಲು

ಗ್ರಹಣ ಬಿಟ್ಟ ಹಾಗೆ
ಮುಖದ ಕಳೆ
ಕಣ್ಣ ಕಾಂತಿ



ನಗು
ವಾಪಸ್

ಏನೇನೋ ಹೇಳೋದಿದ್ದರೂ ಈಗ
ಒಂದೂ ಶಬ್ದ ಹುಟ್ಟೋದಿಲ್ಲ

ಮುಗ್ಧತೆ ಉಳಿದಿದ್ದಾಗ ಚೂರು ಪಾರು
ಎಷ್ಟೋ ಚೆನ್ನಿತ್ತು
ಕುಣಿದಾಡಿಕೊಂಡು ಇರಬಹುದಿತ್ತು
ಸುತ್ತಮುತ್ತ

ಒಂಟಿಯಾಗಿಬಿಟ್ಟಿದೀನಿ ಅಂದರೆ
ಬದುಕಲು ಬೇರೆ ದಾರಿ ಇದೆಯೇ?
ಉತ್ತರ

ನಿಮಗೆ ಹೇಳಲೇನೂ ಉಳಿದಿಲ್ಲ ನನ್ನ ಬಳಿ
ಅಂದರೆ
ಒಳ್ಳೇದೇ ಆಯಿತು ಅಂದುಕೋ ಅಂತಾರೆ

ಇದಕ್ಕೆ ಪರಿಹಾರವೇ ಇಲ್ಲವೇ?
ಬಿಕ್ಕಿದರೆ
Welcome to our side of the world
ಅಂತ ಮುಗುಳ್ನಗುತ್ತಾರೆ

ಅದೊಂದಿರಬೇಕಲ್ಲ
ಪ್ರಪಂಚದಲ್ಲಿ ಯಾರೂ ಇನ್ನೂ
ಹೇಳದೇ ಇರೋದು

ರೂಢಿಯಾದ ಮೆಟ್ಟಿಲನ್ನು
ಕಣ್ಣಿನಲ್ಲಳೆಯದೇ
ಸರ ಸರ ಇಳಿದ ಹಾಗೆ
ಎಲ್ಲ ತಿಳಿದು ಕುಳಿತ ಇವರಿಗೆ

ಅದನ್ನು ತಿಳಿಸಬೇಕು ಅಂತ
ಹುಡುಕಿ ಹುಡುಕಿ
ಸೋಲುತ್ತಿದ್ದೇನೆ.